ರಾನಾ ರಾಕಾ ಖುಷಿಯಿಂದ ಕುಣಿಯುತ್ತಿದ್ದರು. "ಹೇಗೆ ಹೋಗೋಣ? ರಿಕ್ಷಾ? ಸ್ಕೂಟರ್?"

"ಥತ್, ಅವೆಲ್ಲ ಚಿಕ್ಕ ಗಾಡಿ! ದೊಡ್ಡದೊಡ್ಡ ಪಬ್ಲಿಕ್ ಬಸ್ ಇದ್ದಾವಲ್ಲ ನಮಗೋಸ್ಕರ?"

ಆವಾಗವಾಗ ಬಾಬಾ ಹೇಳುತಿದ್ದ, "ಶಹಜಹಾನ್ ಪುರ್ ಮೈದಾನದಲ್ಲಿ ಸರ್ಕಸ್ ಬಂದಿದೆ ಹೋಗೋಣ ನಡೀರಿ".

ಆದರೆ, ಇಲ್ಲೀತನಕ ಒಂದಿನಾನೂ ಎಲ್ಲಿಗೂ ಹೋಗೋಕೆ ಆಗಿರಲಿಲ್ಲ. ಅಮ್ಮ ಹೋಗದಂತೆ ತಡೆಯುತ್ತಿದ್ದಳು. ಆಗ ಅಮ್ಮ ಖಳನಾಯಕಿಯಂತೆ ಕಾಣುತ್ತಿದ್ದಳು. ಅಮ್ಮ ಒಂದೇ ಸಮನೆ ಅಂಗಡಿ ಲೆಕ್ಕ, ದಿನಸಿ ಸಾಮಾನು, ಸ್ಕೂಲು ಫೀಜು... ಹೀಗೆ ಸಾವಿರಾರು ಸಮಸ್ಯೆ ಹೇಳುತ್ತಿದ್ದಳು. ಮಕ್ಕಳಿಗೆ ಒಂಚೂರೂ ಇಷ್ಟ ಆಗ್ತಿರಲಿಲ್ಲ, ಅತ್ತ ಬಾಬಾನ ಮುಖವೂ ಗಾಳಿ ಇಳಿದ ಬಲೂನಿನಂತೆ ಮುದುಡಿಹೋಗುತ್ತಿತ್ತು.



ಈಗ ಈ ಸಮಸ್ಯೆಗಳಿಲ್ಲ. ಸ್ಕೂಲ್ ಫೀಜು ಕಟ್ಟದಿರುವ ಸನ್ನಿವೇಶವಿಲ್ಲ. ಟೇಬಲ್ ಮೇಲೆ ಒಳ್ಳೆಒಳ್ಳೇ ತಿಂಡಿತೀರ್ಥ ಇರುತ್ತವೆ. ಅಲ್ಮೇರಾದಲ್ಲಿ ಹೊಸ ಹೊಸ ಬಟ್ಟೆಗಳು, ರಜಾದಿನ ಸೈಫುಲ್ ಅಂಕಲ್ ಕಾರಲ್ಲಿ ಮಧ್ಯಾಹ್ನ ಸುತ್ತಾಟ, ಅಮ್ಮ ಶಾಲ್ ಮರಗಳ ಸಾಲಿನಲ್ಲಿ ಸೈಫುಲ್ ಅಂಕಲ್ ಜೊತೆ ಮಾತಾಡ್ತಾ ಮಾತಾಡ್ತಾ ನಡೀತಾ ಇರ್ತಾರೆ. ಇವರಿಬ್ಬರು ಅಲ್ಲಿರುವ ಕೊಳದ ಪಕ್ಕ ಸುಮ್ಮನೆ ಕೂರ್ತಾರೆ. ಅವರ ಮಾತಲ್ಲಿ ಮತ್ತೆಮತ್ತೆ ಬಾಬಾನ ನೆನಪು ಬರುತ್ತೆ. ರಾಕಾ ಬಹುತೇಕ ಮೌನಿ. ಅದಕ್ಕೆ ರಾನಾಗೆ ಕೆಲವೊಮ್ಮೆ ಕೋಪ, ಕೆಲವೊಮ್ಮೆ ದುಃಖವಾಗುತ್ತೆ. ಹೋದ ಶುಕ್ರವಾರ ರಾನಾ ಹೇಳ್ತಿದ್ದ, "ಗೊತ್ತಾ ದೀದಿ, ಕ್ಲಾಸ್ ಹುಡುಗರೆಲ್ಲ ತಪ್ಪು ಅಡ್ರೆಸ್ ಕೊಟ್ಟು ತಮಾಷೆ ಮಾಡ್ತಾರೆ. ಯಾರ್‍ಯಾರದ್ದೋ ಅಡ್ರೆಸ್ ಕೊಟ್ಟು ಅವರು ಲಂಡನ್‌ಗೆ ಹೋಗ್ತಾರೆ, ಹೋಗು ಅಂತಾರೆ".

ರಾಕಾ ಸುಮ್ಮನಿರುವುದನ್ನು ಕಂಡು ಕಿರುಚ್ತಾನೆ, "ನೀನೂ ತಮಾಷೆ ನೋಡ್ತಿದಿಯಾ, ಅಲ್ವಾ ದೀದಿ?"

ಆ ದಿನ ರಾಕಾಗೂ ಕೋಪ ಬಂದಿತ್ತು, "ನೀನು ಈ ಹುಚ್ಚುತನ ಬಿಡು! ನೀನು ಕುಣೀತಿಯಾ ಅಂತಾನೆ ಅವರು ನಿನ್ನ ಕುಣಿಸ್ತಾರೆ. ಬಾಬಾನ ಬಗ್ಗೆ ನಿನಗ್ಯಾಕಿಷ್ಟು ಆಸಕ್ತಿ? ಅವನು ನಿನಗೆ ಊಟ ಹಾಕ್ತಾನಾ, ಬಟ್ಟೆ ತರ್ತಾನಾ? ಬರೀ ಬಾಬಾ ಆದ್ರೆ ಆಗೋಲ್ಲ. ಬಾಬಾಗೆ ಜವಾಬ್ದಾರಿ ಇರಬೇಕು".

"ಓ, ಓ ದೀದಿ ನೀನು ಮುದುಕಿ ಥರ ಮಾತಾಡ್ತೀದಿಯ."

"ಮಾತಾಡೋದಿಲ್ಲ. ಮಾತಾಡೋಕೋ ಇಷ್ಟವಿಲ್ಲ. ಯಾಕೋ ಗೊತ್ತಿಲ್ಲ, ಯಾರೋ ನನಗೆ ಈ ಥರ ಮಾತಾಡುವಂತೆ ಮಾಡ್ತಿದ್ದಾರೆ." ನಿಜ, ಮಧ್ಯೆಮಧ್ಯೆ ರಾಕಾಗೆ ಅನುಮಾನ ಆಗ್ತಿದೆ. ಅವಳ